ತುಂಬಿರಬಹುದು' ಎಂದುಕೊಂಡು ಅವೆರಡನ್ನು ತಳ್ಳಿಕೊಂಡು ತಂದು ರಿಕ್ಷಾಕ್ಕೆ ಹಾಕಿ, ಹೆಣ್ಣುಮಕ್ಕಳ ಹಾಸ್ಟೆಲು ಮುಟ್ಟಿಸಿ ನಾನು ವಿಶ್ವವಿದ್ಯಾಲಯದ ಪುರುಷರ ವಸತಿನಿಲಯಕ್ಕೆ ಬಂದೆ. ಬಸ್ಸಿನಲ್ಲಿ ಬಂದಿದ್ದರೆ ಹಾಸ್ಟೆಲು ಮುಂದಿನ ರಸ್ತೆಯಲ್ಲಿ ಇಳಿದು ನಿಧಾನವಾಗಿ ನಡೆಯಬಹುದಿತ್ತು. ಈ ರಿಕ್ಷಾದವನು ಬೇಗ ಬಂದುಬಿಟ್ಟನಲ್ಲ ಅಂದುಕೊಂಡೆ.

***

ನನ್ನ ಅವಳ ಮುಂದಿನ ದಿನದ ಭೇಟಿಯ ಮಾತುಕತೆಗಳು ಬರಿಯ ಬಯಲಾಡಂಬರದಿಂದ ಕೂಡಿದ್ದವು. ಊರು ಕೇರಿಯ ವಿಚಾರಗಳಿಂದಲೇ ನಮ್ಮ ಮಾತು ಆರಂಭವಾಯಿತು. ನಾವು ಹೇಗೋ ಸ್ನೇಹಿತರಾದದ್ದು ಸರಿ. ಆದರೆ, ನಮ್ಮ ಊರುಕೇರಿಗಳು ದೂರವಿದ್ದವು. ನನ್ನದು ಮೂಡಣಸೀಮೆಯ ಅರಣ್ಯ ಸರಹದ್ದು; ಅವಳದು ತುಂಗಭದ್ರಾ ನದಿ ಆಚೆ ದಂಡೆಯ ಪಟ್ಟಣಸೀಮೆ. ಯಥಾವಿಧಿಯಾಗಿ ಹೊತ್ತು ಹೋಗುವ ಮಾತುಕತೆಯಾಗಿತ್ತು ನಮ್ಮದು. ನಾನು ಅವಳಿಗೆ ನನ್ನ ಊರುಕೇರಿಯ ಇಲ್ಲಸಲ್ಲದ ಸೌಂದರ್ಯ ವರ್ಣಿಸುತ್ತ, ಆಗಾಗ ಪ್ರೊಫೆಸರ್‌ಗಳು ಹೇಳುತ್ತಿದ್ದ ಕನ್ನಡ ಕಾವ್ಯಗಳ ಉತ್ಪ್ರೇಕ್ಷೆಯ ನೆರವನ್ನು ಪಡೆದು ಪುರಾಣ ಮಾದರಿ ಹರಟೆ ಹೊಡೆಯುತ್ತಿದ್ದೆ. ಅಂಥ ದಿನಗಳಲ್ಲೇ ನಾನು ಹೂವು, ದುಂಬಿ, ಆಕಾಶ, ಸೂರ್ಯ, ಚಂದ್ರ, ಕಪ್ಪುಮೋಡ, ಗುಡುಗು ಸಿಡಿಲು ಎಂದು ಪದ್ಯ ಬರೆಯುವ ಕವಿಯೂ ಆಗಿಬಿಟ್ಟೆ.

ಒಮ್ಮೆ ಚಂಪಾ, 'ನೀನು ಯಾವುದಾದರೂ ಕಾಲೇಜಿನಲ್ಲಿ ಮೇಷ್ಟ್ರಾಗಬೇಕು ನೋಡು' ಅಂದಳು.

ನಾನು ಬೆಚ್ಚಿಬಿದ್ದು, 'ಅಯ್ಯಯ್ಯೋ ನನ್ನ ಕೈಯಲ್ಲಿ, ನಮ್ಮಪ್ಪನ ಹರಿದ ಜೇಬಲ್ಲಿ ಅಷ್ಟೊಂದು ಕಾಸಿನ ಕಂತೆ ಎಲ್ಲಿದೆ?' ಎಂದೆ.

'ಮತ್ತೆ ನೀನು ಓದುತ್ತಿರುವುದು?...' ಎಂದಳು.

ಅಲ್ಲಿಗೆ ನನ್ನ ವರ್ಣನಾತೀತ ಮಾತುಗಳು ಗಂಟಲಲ್ಲಿ ಸಿಕ್ಕಿಕೊಂಡಂತಾದವು.

ಎಷ್ಟೋ ಹೊತ್ತಿನ ಮೇಲೆ ತಲೆಗೆ ಇನ್ನಷ್ಟು ತಣ್ಣೀರು ಸುರಿಯುವವಳಂತೆ ಚಂಪಾ, 'ಅಯ್ಯೋ ಬಿಡೋ ನಿನ್ನ, ನನ್ನ ಪ್ರೊಫೆಸರ್‌ಗಳದು ಬರೀ ಖಾಲಿ ಚೊಂಬು. ಆ ಪುರಾಣ ಕವಿಗಳ ರಾಜಾಧಿರಾಜರ ಕಥೆ ಇನ್ನೊಂದು ಉತ್ಪ್ರೇಕ್ಷಾಲಂಕಾರದ ಮೂಟೆ. ಎರಡು ಒಂದೇ ತಕ್ಕಡಿಯಲ್ಲಿ ತೂಗುವಂಥವು' ಎಂದಳು. 'ಅವರು ಕೋಣೆಯಲ್ಲಿ ಆಡುವುದಕ್ಕೂ, ಹೊರಗೆ ಮಾಡುವುದಕ್ಕೂ...' ಮುಂದೆ ಏನೂ ಹೇಳದವಳಾಗಿ ಆಕಾಶದ ಶೂನ್ಯವನ್ನು ದೃಷ್ಟಿಸತೊಡಗಿದಳು. ವಿಶ್ವವಿದ್ಯಾಲಯದ ದೂರದ ಆಡಳಿತ ಕಚೇರಿ ಕಟ್ಟಡದ ಮೇಲೆ ಕತ್ತಲು ತೊಡಗಲು ಹತ್ತಿಕೊಂಡ ಅಕ್ಷರಗಳ ಹಿಂದಿನ ಬೆಳಕು ಮಂದಮಂದವಾಗಿ ಕಾಣಿಸುತ್ತಿತ್ತು. ನೋಡಿದರೆ ವಿಶ್ವವಿದ್ಯಾಲಯದ ನಾಮಧೇಯದ ನಡುವಣ ಅಲ್ಲಲ್ಲಿಯ ಅಕ್ಷರಗಳು ಕೆಟ್ಟು ಇದ್ದಬದ್ದವು ಮಸುಕು ಮಸುಕಾಗಿ ಕಾಣಿಸುತ್ತಿದ್ದವು. 'ಶ' ಕೆಳಗೆ 'ವ' ಒತ್ತಕ್ಷರ ಇಲ್ಲವೇ ಇಲ್ಲ. 'ವಿದ್ಯಾನಿಲಯ' ಪದದಲ್ಲಿ 'ದ್ಯಾ' ಬಿದ್ದು ಹೋಗಿದೆ. ಅಂಥದೊಂದು ವೇಳೆ ಚಂಪಾ 'ನಾಳೆ ಮಧ್ಯಾಹ್ನ ಸಿಕ್ಕುತ್ತೀಯಾ' ಅಂದಳು.

'ಬರ್ತೀನಿ, ಸ್ವಲ್ಪ ಲೇಟು.'

'ಯಾಕೆ.'

'ಅದೇ ಹುಡುಗರದು ಸ್ಟ್ರೈಕು.'

ವಿಶ್ವವಿದ್ಯಾಲಯದ ಆಗುಹೋಗುಗಳ ಬಗ್ಗೆ ಗಮನವಿದ್ದೂ ಇಲ್ಲದಂತಿದ್ದ ಅವಳು, 'ಅದೆಂಥ ಸ್ಟ್ರೈಕು ನಿಮಗೇನು ಕೆಲಸವಿಲ್ಲವೇ... ಹಾಸ್ಟೆಲಲ್ಲಿ ಊಟ ಸರಿ ಇಲ್ಲವಾ?' ಅಂದಳು.

'ನಿಜ ಊಟ ಸರಿ ಇಲ್ಲ. ತರಕಾರಿ ಕೊಳೆತದ್ದು, ಅನ್ನದಲ್ಲಿ ಹುಳ ಅನ್ನು.'

'ನಮ್ಮ ಹಾಸ್ಟಲೇ ಸರಿಯಪ್ಪ. ನಾವು ದುಡ್ಡು ಕಟ್ಟೋದು ಕಟ್ಟಿಬಿಡ್ತೀವಿ. ಊಟನೇ ಮಾಡಲ್ಲ. ನಮ್ಮ ರೂಮಲ್ಲೇ ಸ್ಟೌವ್ ಹಚ್ಚಿ ಚಿತ್ರಾನ್ನ, ಉಪ್ಪಿಟ್ಟು ಮಾಡ್ಕಂಡುಬಿಡ್ತೀವಿ. ನಾವು ಹುಡುಗೀರಲ್ಲವಾ ನಿಮ್ಮ ಥರ ಗಲಾಟೆಗಿಲಾಟೆ ಮಾಡಲ್ಲ. ವಾರ್ಡನ್ನು ನಮ್ಮ ತಲೆ ಸವರಿ ಯಾರೂ ಗಲಾಟೆ ಮಾಡ್ದಂಗೆ ನೋಡ್ಕೋತಾರೆ.'

'ಈಗ ನಮ್ಮ ಸ್ಟ್ರೈಕು ಹಾಸ್ಟೆಲಿನದಲ್ಲ.'

'ಮತ್ತೆ.'

'ಅದೇನೋ ಯೂನಿವರ್ಸಿಟಿ ಪ್ರಾಬ್ಲಮ್ಮು. ಅಪಾಯಿಂಟ್‌ಮೆಂಟು, ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ನು, ಸ್ಲೆಟ್ ಎಗ್ಸಾಮು, ಎನ್‌ಕ್ವೈರಿ, ಪೊಲೀಸು, ಎಫ್‌ಐಆರ್ ಅಂತ... ವಿ.ಸಿ. ಬೆಂಗಳೂರು, ಡೆಲ್ಲಿ, ಮಿನಿಸ್ಟರುಗಳ ಮಿಟಿಂಗ್ ಅಂತ ಹೋಗಿದಾರೆ. ಅದಕ್ಕೆ ನಮ್ಮ ಡೈರೆಕ್ಟರು ಒಂದಷ್ಟು ಹುಡುಗರನ್ನ ಸೇರಿಸಿ